ಅದನ್ನೇ ಸರಿ ಎಂದು ಸಾಧಿಸಿಕೊಂಡು ಬದುಕು ಮಾಡುವುದೇ ಪುರುಷ ಪ್ರವೃತ್ತಿಯಾಗಿತ್ತೇ ಆ ಕಾಲದಲ್ಲಿ? ಯೋಚಿಸಿದರೆ ಹೌದೇನೋ ಅನಿಸುತ್ತದೆ. ಮನೋರಂಜನೆಗೆ ರೇಡಿಯೊ ಹೊರತುಪಡಿಸಿ ಬೇರೆ ಮಾಧ್ಯಮಗಳೇನೂ ಲಭ್ಯವಿರದಿದ್ದ ಕಾಲದಲ್ಲಿ ಕೋರ್ಟು ಕಚೇರಿ ಅಲೆಯುವುದು, ಅನೈತಿಕ ಸಂಬಂಧ ಅರಸುವುದು, ಹೀಗೆ ಏನೋ ಒಂದು ಅಸಂಗತವನ್ನು ಹೆಚ್ಚಿನವರು ರೂಢಿಸಿಕೊಂಡಿರುತ್ತಿದ್ದರು. ಕೆಲಸಕ್ಕೆ ಬರುತ್ತಿದ್ದ ಹೆಣ್ಣಾಳುಗಳನ್ನು ಒಳಗೆ ಹಾಕಿಕೊಂಡವರು ಅಲ್ಲಲ್ಲಿ ಇದ್ದೇ ಇರುತ್ತಿದ್ದರು. ಎಲ್ಲಾದರೂ ಸಮಾರಂಭವಿದ್ದರೆ 'ಸಂತೆ ಸೇರುವುದಕ್ಕಿಂತ ಮೊದಲು ಗಂಟುಕಳ್ಳರು ಸೇರಿದಂತೆ' ಇಸ್ಪೀಟಿನ ತಲುಬಿನವರು ಒಗ್ಗೂಡುತ್ತಿದ್ದರು. ಹೆಚ್ಚು ಜನ ಸುಳಿಯದ ಕಡೆ ಜಮಖಾನ ಬಿಚ್ಚಿದರು ಅಂದರೆ ಮದುವೆಯೋ, ಮುಂಜಿಯೋ, ನವರಾತ್ರಿ ಪಾರಾಯಣವೋ, ಮತ್ತೊಂದೋ, ತಾವು ಯಾಕೆ ಬಂದಿದ್ದೇವೆಂಬುದೇ ಮರೆತು ಹೋಗುತ್ತಿತ್ತು. ಇಂಥವರಿಗೆ ಕೂತ ಕಡೆಯೇ ಬೇಕಾಗಿದ್ದನ್ನು ಒದಗಿಸುವ ಏನಾತಿಗಳು ಇದ್ದೇ ಇರುತ್ತಿದ್ದರು. ಇಸ್ಪೀಟಾಟ ಆಡಿ ಮನೆ ಮಠ ಕಳೆದುಕೊಂಡು ಬೀದಿಗೆ ಬಿದ್ದವರು ಬೇಕಾದಷ್ಟು. ಅವರ ತಲುಬಿಗೆ ಹೆಂಡತಿ, ಮಕ್ಕಳಿಗೆ ಶಿಕ್ಷೆ. ಈ ಶಿವರಾಮ ಮತ್ತೊಂದು ಥರದ ಗಿರಾಕಿ. ಒಡಹುಟ್ಟಿದ ತಮ್ಮನಿಗೇ ಮೂರು ನಾಮ ಎಳೆಯಲು ಹಿಂದೆಮುಂದೆ ನೋಡಲಿಲ್ಲ. ನ್ಯಾಯವಾಗಿ ನಡೆದುಕೊಂಡು ಹೊಕ್ಕುಬಳಕೆ ಇಟ್ಟುಕೊಂಡಿದ್ದರೆ ತನಗೆ ಪಾಪಭೀತಿ ಕಾಡಬೇಕಿತ್ತೇ? 'ಹುಯಿಲು ಕೊಡ್ತಾರಂತೆ' ಎನ್ನುವ ಸುದ್ದಿ ತಂದು ವರದಿವಳು ಆ ಮನೆಯಲ್ಲಿ ಕೆಲಸಕ್ಕಿದ್ದ ಹೆಣ್ಣಾಳು. ಉದ್ದೇಶಪೂರ್ವಕ ಅವಳ ಹತ್ತಿರ ಹೇಳಿ ಕಳಿಸಿರಬಹುದು ಕನಕ. ಅಥವಾ ಇವಳೇ ಮನೆಯಲ್ಲಾಡುವ ಮಾತನ್ನು ಕದ್ದು ಕೇಳಿ ಇಲ್ಲಿ ತಂದು ಬಿತ್ತಿರಬಹುದು. ಮನೆಯವರು ಏನೇನು ಮಾತಾಡಿಕೊಳ್ಳುತ್ತಾರೆ ಎಂದು ಕೇಳಿಸಿಕೊಳ್ಳಲು ಕೆಲಸಕ್ಕಿರುವವರ ಕಿವಿ ತುಂಬಾ ಸೂಕ್ಷ್ಮ. ಸೀತಾಲಕ್ಷ್ಮಿ ಅದೆಷ್ಟು ಕಂಗೆಟ್ಟು ಹೋದಳು ಅಂದರೆ ಅವಳಿಗೆ ಕೈಕಾಲು ನಡುಕ ಶುರುವಾಗಿ, ನಿತ್ರಾಣ ಬಂದಂತಾಗಿ, ತನ್ನಿಂದ ಮುಂಚಿನಂತೆ ಮನೆಗೆಲಸ ಮಾಡಲು ಸಾಧ್ಯವೇ ಇಲ್ಲ ಅನ್ನಿಸಿಬಿಟ್ಟಿತ್ತು. ತಡೆಯಲಾಗದೆ ಶಿವರಾಮನಲ್ಲಿ ಕೈಕೈ ಮುಗಿದು ಕೇಳಿಕೊಂಡಿದ್ದಳು,

'ಮಾರಾಯ್ರಾ, ಮೊದಲು ಅವರ ಪಾಲು ತಗೊಂಡ್ಹೋಗಿ ಬಿಸಾಕಿ ಬನ್ನಿ. ದಿನಾ ಅವರು ಶಾಪ ಹಾಕ್ತಿದ್ರೆ ಉದ್ಧಾರಾಗ್ತೀವಾ ನಾವು? ಹುಯಿಲು ಕೊಡ್ತಾರಂತೆ ಕಣ್ರೀ'

'ಹೆದರೋರಿದ್ರೆ ಏನು ಬೇಕಾರೂ ಹೇಳ್ತಾರೆ. ಅಲ್ವೇ, ನಮ್ಮ ಹಿರೀಕರು ಇದನ್ನೆಲ್ಲಾ ನ್ಯಾಯವಾಗಿ ಮಾಡಿಟ್ಟಿರ್ತಾರೆ ಅಂತ ಗ್ಯಾರಂಟಿ ಉಂಟಾ? ಯಾರ್ಯಾರದ್ದೋ ತಲೆ ಒಡೆದಿರಬಹುದು, ಗಂಟು ದೋಚಿರಬಹುದು, ಕಮಲಕ್ಕನ ಗಂಡನ ಮನೆಯೋರು ಹೊಡ್ಕಂಡು ತಿನ್ಲಿಲ್ವಾ? ಏನಾಗಿದೆ ಅವ್ರಿಗೆ?'

'ನಿಮ್ಮನ್ನೂ ಸೇರಿಸ್ಕಳ್ಳಿ...' ಅಂದಳು ಸೀತಾಲಕ್ಷ್ಮಿ.

'ಹಲ್ಲುದುರಿಸ್ತೀನಿ...' ಅಂದ ಶಿವರಾಮ. ತನ್ನಲ್ಲಿ ತಪ್ಪಿದೆ ಎಂದು ಒಪ್ಪಿಕೊಳ್ಳಲು ಅವನು ಯಾವತ್ತೂ ಸಿದ್ಧನಿಲ್ಲ. ಆಗಲೂ ಇಲ್ಲ, ಈಗಲೂ ಇಲ್ಲ. ತಪ್ಪನ್ನೂ ಸರಿಯೆಂದೇ ವಾದಿಸಿ ಸಾಧಿಸಲು ನೋಡುವ ಮನುಷ್ಯ. ಪಾಪಪ್ರಜ್ಞೆ ಕಾಡುವುದು ಯಾರಿಗೆ? ಸರಿ ತಪ್ಪುಗಳ ಕುರಿತು ವಿಮರ್ಶೆ ಮಾಡುವ ಬುದ್ಧಿ ಇರುವವರಿಗೆ. ಆ ಬಗ್ಗೆ ಯೋಚಿಸುವ ಗೊಡವೆಗೇ ಹೋಗದಿದ್ದರೆ ತಾವು ಮಾಡಿದ್ದೆಲ್ಲಾ ಸರಿಯಾದದ್ದೇ.

'ಎಂತೆಂಥ ಕೊಲೆ ಮಾಡಿ ಮುಚ್ಚಿ ಹಾಕಿದವ್ರೇ ದಕ್ಕಿಸ್ಕಂಡಿದಾರೆ ಗೊತ್ತಾ? ಬೇಕಾ ಉದಾಹರಣೆ?' ಕೇಳಿದ್ದ ಶಿವರಾಮ. ಅವನ ತೋರುಬೆರಳು ಚಾಚುವುದು ವಾರಗಿತ್ತಿಯ ತೌರಿನ ಕಡೆಗೆ ಎಂದು ಸೀತಾಲಕ್ಷ್ಮಿಗೆ ಗೊತ್ತಿದೆ. ಕನಕನ ಅಣ್ಣಂದಿರು ಸಾಮಾನ್ಯದವರಲ್ಲ ಎನ್ನುವುದು ಅವನ ಹೇಳಿಕೆ, ನಂಬಿಕೆ. ಅಂಥವರೊಡನೆ ಗೊತ್ತಿದ್ದೂ ಗೊತ್ತಿದ್ದೂ ದ್ವೇಷ ಕಟ್ಟಿಕೊಳ್ಳಬೇಕಾಗಿತ್ತಾ ಈ ಮನುಷ್ಯ? ಅಥವಾ ಅಂಥವರೊಡನೆ ದ್ವೇಷ ಕಟ್ಟಿಕೊಳ್ಳುವುದು ಅಹಂಕಾರಕ್ಕೆ ಕೊಂಬು ತರುತ್ತದೆಯೇ? ಹಟ ಸಾಧಿಸುವುದು ಪ್ರತಿಷ್ಠೆಯ ಒಂದು ಸಂಕೇತವೇ? ಮೈಯಲ್ಲಿ ಚಳಿ ಹೊಕ್ಕಂತಾಗುತ್ತಿತ್ತು ಸೀತಾಲಕ್ಷ್ಮಿಗೆ. ಅಸಹಾಯಕತೆಯಿಂದ ಅವಳು ಕೈಕೈ ಹಿಸುಕಿಕೊಂಡು ಕೊನೆಗೆ ಈ ವಿಷಯದಲ್ಲಿ ತಾನು ಮಾಡುವಂತಾದ್ದು ಏನಿಲ್ಲ, ಎಲ್ಲಾ ಮೇಲಿನವನು ನಡೆಸಿದಂತೆ ಎಂದು ದೇವರಿಗೆ ಮುಡಿಪು ತೆಗೆದಿಟ್ಟಿದ್ದಳು. ಹೆದರಿಕೆ ಅನ್ನುವುದು ಅವಳ ಅಂತರಂಗವನ್ನು ಹೊಕ್ಕು ಶಾಶ್ವತವಾಗಿ ಕೂತುಬಿಟ್ಟಿತ್ತು. ಹೊರಗೆಲ್ಲಾದರೂ ಹೋಗಿದ್ದ ಗಂಡ ಮನೆಗೆ ಬರುವುದು ಎರಡು ಗಳಿಗೆ ತಡವಾದರೂ ಹೆದರಿಕೆ, ಮಗುವಿಗೆ ಮೈ ಬೆಚ್ಚಗಾಗಿ ಜ್ವರ ಬಂದರೂ ಹೆದರಿಕೆ, ಕೊನೆಗೆ ಕೊಟ್ಟಿಗೆಯಲ್ಲಿ ಕರೆಯುವ ದನದ ಹಾಲು ಜಂಬಾದರೂ ಹೆದರಿಕೆ. ಏನು ಮಾಟ ಮಂತ್ರ ಮಾಡಿಸಿದ್ದಾರೋ, ಯಾವ ದೇವರ ಮೊರೆ ಹೊಕ್ಕಿದ್ದರೋ ಎನ್ನುವ ಬೆಂಬಿಡದ ಭೀತಿ. ಬೇಕಿತ್ತಾ ಇದೆಲ್ಲಾ?

***

ವೆಂಕಟರಾಮುವಿನ ಹೊಸ ಮನೆ ಪೂರ್ಣಗೊಂಡು ಗೃಹಪ್ರವೇಶದ ಹಂತ ತಲುಪಿದ ಸುದ್ದಿ ಸೀತಾಲಕ್ಷ್ಮಿಯ ಕಿವಿಯವರೆಗೆ ಬಂದು ತಲುಪಿತ್ತು. ಮನೆ ಒಕ್ಕಲಿಗೆ ಹೇಳಿಕೆ ಬರುತ್ತದೆಯೋ, ಇಲ್ಲವೋ ಎನ್ನುವ ಕಾತರ, ನಿರೀಕ್ಷೆ. ಆ ಮನೆಗೂ, ಈ ಮನೆಗೂ ಅಂದಾಜು ಎರಡು ಮೈಲಿ ದೂರ. ಈ ಮನೆ ತೋಟದ ಹತ್ತಿರವಾದರೆ ಆ ಮನೆ ಗದ್ದೆಯ ಹತ್ತಿರ. ಅತ್ತೆ ಒತ್ತಾಯ ಮಾಡಿದರೆ, ಎಷ್ಟಾದರೂ ದೊಡ್ಡಣ್ಣ ಎಂದು ವೆಂಕಟರಾಮು ಹಟ ಬಿಟ್ಟರೆ, ಬರುತ್ತದೆ ಹೇಳಿಕೆ. ಮನೆಯನ್ನೇನು ಸಲಾಸಲ ಕಟ್ಟಲು ಬರುತ್ತದೆಯಾ? ಇತ್ತ ಗಂಡನ ಮನಸ್ಸೂ ಕರಗಿ ಶಿವರಾಮ ರಾಜಿಯ ಮಾತಾಡಿದರೆ ಎಷ್ಟು ಚಂದ ಎಂದು ಕನಸು ಕಾಣುತ್ತಿದ್ದಳು ಸೀತಾಲಕ್ಷ್ಮಿ. ನಾಳೆ ರಾತ್ರಿ ಹೋಮ, ನಾಡಿದ್ದು ಗೃಹಪ್ರವೇಶ, ಸಂತರ್ಪಣೆ ಎಂದು ಗೊತ್ತಾದರೂ ಅವಳು ನಿರೀಕ್ಷಿಸಿದ ಕರೆ ಬರಲಿಲ್ಲ. ಉದ್ದೇಶಪೂರ್ವಕ ಎಂಬಂತೆ ಅಡಿಕೆ ಮಾರಾಟದ ಹೆಳೆ ಮಾಡಿಕೊಂಡು ಶಿವಮೊಗ್ಗಕ್ಕೆ ಎದ್ದಿದ್ದ ಶಿವರಾಮ. ಅವನು ಇಲ್ಲದಿದ್ದಾಗ ಮನೆ ಕಾವಲಿಗೆ ಅವನ ನಂಬಿಕಸ್ಥ ಜನ ಇದ್ದೇ ಇದ್ದರು. ಯಾರು ಬಂದು ಕರೆದರೂ ಮುಂಚೇಕಡೆಯ ಬಾಗಿಲು ತೆಗೆದು ಒಳಗೆ ಬಿಟ್ಟುಕೊಳ್ಳಬಾರದೆಂದು ಶಿವರಾಮನ ಕಟ್ಟಪ್ಪಣೆಯಾಗಿತ್ತು. ಸೀತಾಲಕ್ಷ್ಮಿ ಮೂರುಸಂಜೆಯಾಗುವುದರೊಳಗೆ ಊಟ ಮುಗಿಸಿ ಮುಂದಿನ ಬಾಗಿಲ ಅಗುಳಿ ಹಾಕಿಕೊಂಡಿದ್ದಳು. ಮನೆಕಾವಲಿನ ಜನ ಎಂಟು ಗಂಟೆಯ ಸುಮಾರಿಗೆ ಬರುವ ಅಂದಾಜು. ಬಂದ ಮೇಲೆ ಅಡಿಕೆ ಸುಲಿಯುವ ಒಪ್ಪಾರದಲ್ಲಿ ಮಲಗುತ್ತಾರೆ. ಅವರಿಗಾಗಿ ಕಾಯಬೇಕಾದ್ದೇನಿಲ್ಲ.

ವರ್ಷ ತುಂಬಿ ಎರಡು ತಿಂಗಳಾಗಿದ್ದ ಪ್ರಸನ್ನನಿಗೆ ಈಗ ಕಾಲು ಬಂದಿತ್ತು. ಹೊಸ ವಿದ್ಯೆ ಕಲಿತ ಹುಮ್ಮಸ್ಸಿನಲ್ಲಿ ಅವನು ಮನೆ ತುಂಬಾ ಪುಟುಪುಟು ಓಡಾಡುತ್ತಿದ್ದ. ಬೀಳುತ್ತಿದ್ದ ಮತ್ತೆ ಏಳುತ್ತಿದ್ದ. 'ಚಾಷ್ಟೆ ಮಾಣಿ...' ಎಂದು ಮಗನನ್ನು ಮುದ್ದುಗರೆಯುವಾಗ ಅತ್ತೆಯ ನೆನಪಾಗುತ್ತಿತ್ತು ಸೀತಾಲಕ್ಷ್ಮಿಗೆ. ಮೊಮ್ಮಗನನ್ನು ನೋಡಿ ಎಷ್ಟು ಆಸೆ ಮಾಡುತ್ತಿದ್ದರೋ, ಸಂತೋಷಪಟ್ಟುಕೊಳ್ಳುತ್ತಿದ್ದರೋ?

ಮಗನನ್ನು ಸೊಂಟದಲ್ಲಿ ಎತ್ತಿಕೊಂಡು ಸೀತಾಲಕ್ಷ್ಮಿ ಬಾಕಿ ಉಳಿದಿದ್ದ ರಾತ್ರಿಯ ಕೆಲಸಗಳನ್ನು ಪೂರೈಸುವಾಗ ಮುಂಚೇಕಡೆಯ ಬಾಗಿಲು ತಟ್ಟಿದ ಶಬ್ದ. ಕಿವಿ ನೆಟ್ಟಗಾಯ್ತು ಸೀತಾಲಕ್ಷ್ಮಿಗೆ. ಮೈಯ ರಕ್ತ ಬಿಸಿಯೇರಿದಂತಾಗಿ ಕಾಲುಗಳಲ್ಲಿ ನಡುಕ. ಹೊತ್ತು ಕಾದು ಯಾರೋ ಮನೆ ನುಗ್ಗಲು ಬಂದೇಬಿಟ್ಟರೇ? ಹೊಸಬರಾದರೆ ತೋಳದಂತಿದ್ದ ನಾಯಿ ಕಿವಿ ಹೊಟ್ಟೆ ಹಾರುವಂತೆ ಬೊಗಳಬೇಕಿತ್ತು. ಚಮಡಾ ಹರಿಯುವುದಕ್ಕೂ ಸೈ. ನಾಯಿ ಬೊಗಳಲಿಲ್ಲ ಅಂದರೆ ಹಳಬರೇ. ಕಾವಲಿನವರು ಬೇಗ ಬಂದುಬಿಟ್ಟರೇ? ಅಥವಾ ಈ ಅಥವಾ ಅನ್ನುವ ಯೋಚನೆಯೊಂದಿಗೆ ಸೀತಾಲಕ್ಷ್ಮಿ ಒಂದೇ ಹಾರಿಗೆ ಮುಂದಿನ ಬಾಗಿಲಿನೆಡೆಗೆ ಧಾವಿಸಿದಳು. ಅವಳೆಂದುಕೊಂಡಿದ್ದು ಸುಳ್ಳಾಗಿರಲಿಲ್ಲ. ಬಾಗಿಲ ಸೀಳಿನಲ್ಲಿ ಹಣಿಕಿ ನೋಡಿದವಳಿಗೆ ಕಂಡಿದ್ದು ವೆಂಕಟರಾಮುವಿನ ಮುಖ. ಸೀತಾಲಕ್ಷ್ಮಿ ಎಷ್ಟು ಉದ್ವೇಗಗೊಂಡಳು ಅಂದರೆ ಗಂಡ ಹೇಳಿದ್ದ ಎಚ್ಚರಿಕೆಯ ಮಾತು ಮರೆತೇಹೋಯ್ತು. ಮೈದುನನನ್ನು ನೋಡಿ ಯುಗಗಳೇ ಕಳೆದು ಹೋದಂತಾಗಿದೆ. ಅವನಿಗೂ ಹಾಗೆನಿಸಿರಬಹುದಾ? ಅವನ ಹಿಂದೆ ಇನ್ಯಾರಾದರೂ ಹೊಂಚು ಹಾಕಿ ಬಂದು ನಿಂತು ತಲೆ ಒಡೆಯಬಹುದೆನ್ನುವ ಸಂದೇಹ ಕೂಡಾ ಕಾಡದೆ ಸೀತಾಲಕ್ಷ್ಮಿ ತಟ್ಟನೆ ಬಾಗಿಲು ತೆಗೆದಳು. ಒಳಗೆ ಬಂದ ವೆಂಕಟರಾಮು ಸೀತಾಲಕ್ಷ್ಮಿಯ ಸೊಂಟದಲ್ಲಿದ್ದ ಮಗುವನ್ನು ಸೆಳೆದುಕೊಂಡು ಲೊಚಲೊಚನೆ ಮುತ್ತಿಕ್ಕಿದ. ಹೊಸಬನ ಮುಖ ನೋಡಿ ಕೊಸರಿಕೊಂಡು ಅಳತೊಡಗಿದ ಮಗುವನ್ನು ಮತ್ತಷ್ಟು ಬಿಗಿದಪ್ಪಿದ.

'ನಿನ್ನ ಚಿಕ್ಕಪ್ಪ ಕಣೋ..., ಚಿಕ್ಕಪ್ಪ ಕಣೋ...' ಎನ್ನುವಾಗ ಅವನ ಕಂಠ ಗದ್ಗದವಾಗಿತ್ತು. ಕಣ್ಣಲ್ಲಿ ನೀರಿಳಿಯುತ್ತಿತ್ತು. ಮಗನನ್ನು ತನ್ನ ಕೈಗೆ ಎತ್ತಿಕೊಂಡ ಸೀತಾಲಕ್ಷ್ಮಿಯೂ ಅಳುತ್ತಿದ್ದಳು. ಒಂದೆರಡು ಕ್ಷಣಗಳಲ್ಲಿ ಇಬ್ಬರ ಭಾವೋದ್ವೇಗವೂ ತಗ್ಗಿತು.

(ಸಶೇಷ)